**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 3657/2025**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 3**

**ದಿನಾಂಕಃ 05.06.2026** **ಸಿಡಬ್ಲ್ಯೂ 4**

| | |
|---|---|
| ಹೆಸರು | ವಿನಾಯಕ ಬಿ |
| ತಂದೆ ಹೆಸರು | ವಿರುಪಾಕ್ಷಪ್ಪ |
| ವಯಸ್ಸು | 40 ವರ್ಷ |
| ಉದ್ಯೋಗ | ಅಬಕಾರಿ ಮುಖ್ಯ ಪೇದೆ |
| ವಾಸ ಸ್ಥಳ | ಹರಿಹರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ದಿಃ 05.02.2024 ರಿಂದ ಇಲ್ಲಿಯವರೆಗೆ ಅಬಕಾರಿ ಉಪ ನಿರೀಕ್ಷಕರ ಕಚೇರಿಲ್ಲಿ ಅಬಕಾರಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 28.02.2025 ರಂದು ಚಾಸಾ.1 ಹಾಗೂ ಸಿಬ್ಬಂದಿಗಳೊಂದಿಗೆ ಸರ್ಕಾರಿ ವಾಹನದಲ್ಲಿ ಹರಿಹರ ತಾಲೂಕು ಹರಗನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯ ಹತ್ತಿರ ಗಸ್ತು ಕರ್ತವ್ಯದಲ್ಲಿದಾಗ ಅಬಕಾರಿ ನಿರೀಕ್ಷಕರು ರವರಿಗೆ ಬಂದ ಖಚಿತ ಮಾಹಿತಿ ಎಂದರೆ ತಳವಾರ ತಿಪ್ಪೇಶಪ್ಪ ಬಿನ್ ಹನುಮಂತಪ್ಪ ಇವರ ವಾಸದ ಮನೆಯಲ್ಲಿ ಅಕ್ರಮವಾಗಿ ಮದ್ಯೆ ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಮಾಹಿತಿ ಮೇರೆಗೆ ಅವರ ವಾಸದ ಮನೆಗೆ ತೆರಳಿ ಅಲ್ಲಿಯೇ ಇದ್ದ ಒಬ್ಬ ಸ್ಥಳಿಯರನ್ನು ಅವರಿಗೆ ಬಂದ ಮಾಹಿತಿ ತಿಳಿಸಿ ನೋಟಿಸ ಜಾರಿ ಮಾಡಲಾಗಿ ನಂತರ ತಳವಾರ ತಿಪ್ಪೇಶಪ್ಪ ಇವರ ವಾಸದ ಮನೆಯ ಒಳಗೆ ಹೋಗಿ ನೋಡಿಲಾಗಿ ಒಬ್ಬ ವ್ಯಕ್ತಿ ಗಾಬರಿಯಿಂದ ನಿಂತಿದ್ದನು. ಅವರ ಹೆಸರು ಮತ್ತು ವಿಳಾಸ ಕೇಳಲಾಗಿ ಅವರೇ ತಳವಾರ ತಿಪ್ಪೇಶ್ವ ಎಂದು ತಿಳಿದಿರುತ್ತದೆ. ನಂತರ ಮಾನ್ಯ ನ್ಯಾಯಾಲಯದಿಂದ ಶೋಧನ ವಾರೆಂಟ ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಸ್ಥಳದಲ್ಲಿಯೇ ಶೋಧನಾ ಸಮುಚಿತ ಆಧಾರ ತಯಾರಿಸಿಕೊಂಡು ಪಂಚರು ಮತ್ತು ಸಿಬ್ಬಂದಿಗಳೊಂದಿಗೆ ವಾಸದ ಮನೆಯ ಬಲಬಾಗದಲ್ಲಿರುವ ಗಲ್ಲಾ ಪೆಟ್ಟಿಗೆ ಕಳೆಗೆ ಶೋಧನೆ ಮಾಡಲಾಗಿ ಅಲ್ಲಿ ಬಿಳಿ ಪ್ಲಾಸ್ಟಿಕ್ ಚೀಲ ಇತ್ತು. ಅದರಲ್ಲಿ ಏನಿದೆ ಎಂದು ನೋಡಲಾಗಿ ಅದರಲ್ಲಿ ಓಲ್ಡ ಗ್ರೆಯನ 90 ಎಂ ಎಲ್ 15, ಹೈವರ್ಡಸ ಚಿಯರ್ಸ ವಿಸ್ಕಿಯ 10 ಮದ್ಯದ ಟೆಟ್ರಾ ಪ್ಯಾಕ, 90 ಎಂ ಎಲ್ 7 ಟೆಟ್ರಾ ಪ್ಯಾಕಗಳು ಮ್ಯಾಕಿಟೋಶ ವಿಸ್ಕಿಯ 90 ಎಂ ಎಲ್ 10 ಟೆಟ್ರಾ ಪ್ಯಾಕಗಳು ಕಂಡು ಬಂದವು. ನಂತರ ಚಾಸಾ.1 ರವರು ಸದರಿ ಮದ್ಯದ ಟೆಟ್ರಾ ಪ್ಯಾಕಗಳಿಂದ ಎಲ್ಲಾ ಮದ್ಯದ ಟೆಟ್ರಾ ಪ್ಯಾಕಗಳಿಂದ ಮದ್ಯ ತೆಗೆದುಕೊಂಡಿರುತ್ತೇವೆ. ನಂತರ ಅವುಗಳನ್ನು ಒಂದು ಬಿಳಿ

ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಅರಗಿನಿಂದ ಸೀಲ್ ಮಾಡಿರುತ್ತೇವೆ. ಅವುಗಳಿಗೆ ಸಿಬ್ಬಂದಿ ಹಾಗೂ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಲಾಯಿತು. ನಂತರ ಪ್ರತ್ಯೇಕ ಮಾದರಿ ಮೊಹರಿ ಸೀಲ್ ತಯಾರಿಸಲಾಯಿತು. ಚಾಸಾ.1 ರವರು ಮಧ್ಯವನ್ನು ಜಪ್ತು ಪಡಿಸಿಕೊಂಡರು. ಆರೋಪಿತರಿಗೆ ನೋಟಿಸ ನೀಡಿ ಚಾಸಾ.1 ರವರು ಕಚೇರಿಗೆ ಬಂದು ದೂರು ನೀಡಿರುತ್ತಾರೆ. ಆರೋಪಿತರನ್ನು ಹಾಗೂ ಮು.ಮಾನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ.1 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ನಂತರ ಮು.ಮಾಗಳನ್ನು ಚಾಸಾ.1 ರವರ ನಿರ್ದೇಶನದಂತೆ ಸಹಾಯಕ ರಾಸಾಯನಿಕ ಪರಿವೀಕ್ಷಕರು ಚಿತ್ರದುರ್ಗಕ್ಕೆ ತೆಗೆದುಕೊಂಡು ಹೋಗಿ ವರದಿ ಪಡೆದು ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಪಿ ವಕೀಲರಿಂದಃ**

ಸದರಿ ದಿನ ನಾವು ಹರಗನಹಳ್ಳಿಗೆ ಹೋಗಬೇಕು ಎಂದು ಹೋಗಿರುತ್ತೇವೆ ಎಂದರೆ ಸರಿ. ಆರೋಪಿತರ ಮನೆ ಸುತ್ತಮುತ್ತ ಇಟ್ಟಿಗೆ ಭಟ್ಟಿ ಇದ್ದು ಅಲ್ಲಿ ಸಾಕಷ್ಟು ಕಾರ್ಮಿಕರು ಇರುತ್ತಾರೆ ಎಂದರೆ ಸರಿ. ಚಾಸಾ.1 ರವರು ಅವರನ್ನು ಪಂಚರನ್ನಾಗಿ ಮಾಡುವ ಪ್ರಯತ್ನ ಮಾಡಿರುವುದಿಲ್ಲ. ಚಾಸಾ.1 ರವರು ಇತ್ತು ಎಂದು ಹೇಳಲಾದ ಬಿಳಿ ಪ್ಲಾಸ್ಟಿಕ್ ಚೀಲವನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ. ನಾವು ಆ ದಿನ ಠಾಣೆಯನ್ನು ಸಂಜೆ 5.30 ಗಂಟೆಗೆ ಬಿಟ್ಟಿರುತ್ತೇವೆ. ಆ ದಿನ ನಾವು ಯಾವುದೇ ಗಸ್ತು ಮಾಡಿರುವುದಿಲ್ಲ. ನಾನು ಪಂಚನಾಮೆ ಜೊತೆಗೆ ಮಾದರಿ ಸೀಲ್ ನ ನಮೂನೆಗೂ ಸಹ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಮು.ಮಾಲಿನ ಚೀಲದ ಮೇಲಿರುವ ಚೀಟಿಯಲ್ಲಿ ನನ್ನ ಸಹಿ ಇಲ್ಲ ಎಂದು ನುಡಿಯುತ್ತಾರೆ. ಗುನ್ಹಾ ಸ್ಥಳದಲ್ಲಿ ಜಪ್ತು ಪಡಿಸಿಕೊಂಡ ಚೀಲ ಹಾಗೂ ನ್ಯಾಯಾಲಯದ ಮುಂದೆ ಇರುವ ಚೀಲ ಬೇರೆ ಎಂದರೆ ಸರಿ. ನಾನು ಯಾವುದೇ ದಾಳಿಗೆ ಹೋಗಿಲ್ಲ, ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನಮ್ಮ ಸಿಬ್ಬಂದಿ ಅರುಣ ಕುಮಾರ ಬರೆದಿರುತ್ತಾರೆ. ಅದಕ್ಕೆ ಬರೆಯಲು ಮಾಹಿತಿ ಚಾಸಾ.1 ರವರು ನೀಡಿರುತ್ತಾರೆ ಎಂದರೆ ಸರಿ. ನಿಪಿ.1 ಪಂಚನಾಮೆಯಲ್ಲಿ ಸಹಿಯನ್ನು ಮಾಡಿ ನಂತರದಲ್ಲಿ ಅನುಕೂಲಕ್ಕಾಗಿ ಅದನ್ನು ಬರೆದಿರುತ್ತೇವೆ ಎಂದರೆ ಸರಿ. ಪಂಚನಾಮೆಯಲ್ಲಿ 5.30 ರಿಂದ 6.30 ಎಂದು ಇರುವುದನ್ನು 6.30 ರಿಂದ 7.30 ಎಂದು ತಿದ್ದಲಾಗಿದೆ ಎಂದು ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೂ ಹಾಗೂ ಮು.ಮಾ ಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಮನೆಯಲ್ಲಿ ಮು.ಮಾ ಜಪ್ತು ಪಡಿಸಿಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಪಂಚನಾಮೆ ಮಾಡದಿದ್ದರೂ ಸಹ ಯಾವುದೇ ಪಂಚರನ್ನು ಕರೆದುಕೊಂಡು ಹೋಗದಿದ್ದರೂ ಸಹ ಪಂಚನಾಮೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ